Regd No M 1229 | 43rd Year | Sri 'Satyavadi' Mysore | 5—5—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅರಮನೆ ಸಿಂಸ್ಥೇದಾರ್ ಎ. ಎ ಸುಬ್ಬರಾಯರು [ಬಿಡಿ ಪ್ರತಿ 3ಪೈ

Protectthe cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಮೈಸೂರಿನ ಅಂಗಡಿ ಸಿಬಂದಿ ಇನ್‌ಸೆಕರರಿಂದ ಲಂಚ ಸ್ವೀಕಾರ

ಮೈಸೂರಿನ ಅಂಗಡಿ ಸಿಬ್ಬಂದಿ ಇನ್‌ಸ್ಪೆಕ್ಟರಾದ ಶ್ರೀ ಸುಬ್ರಹ್ಮಣ್ಯಂ ರವರು ನಿನ್ನೆ ರಾತ್ರಿ ಲಂಚ ಸ್ವೀಕಾರ ಮಾಡಿದ ಸಂದರ್ಭದಲ್ಲಿ ಸಿಕ್ಕಿಬಿದ್ದರು

ಮೈಸೂರು ಸಯ್ಯಾಜಿರಾವ್ ರಸ್ತೆಯಲ್ಲಿರುವ ಇಂದ್ರಕೆಫೆಯ ಮಾಲೀಕರಿಂದ ರೂ 100 ಪಡೆದರೆಂದೂ, ಅನಂತರ ಮೇಲಿನಿಂದ ಕೆಳಗಿಳಿದು ಕಾಫಿ ಬಿಲ್ ಕೊಟ್ಟು ಹೊಂಗೆ ಹೋಗುವದರಲ್ಲಿದ್ದಾಗ ಲಂಚ ನಿರೋಧ ಶಾಖೆಯವರಿಂದ ಹಿಡಿಯಲ್ಪಟ್ಟರೆಂದೂ ಗೊತ್ತಾಗಿದೆ.

ಲಂಚ ನಿರೋಧ ಶಾಖೆ ಇನ್‌ಸ್ಪೆಕ್ಟರರಾದ ಶ್ರೀ ಸುಬ್ಬಣ್ಣನವರು ಇದನ್ನು ಪತ್ತೆ ಹಚ್ಚಿದರು.

ಇಂದ್ರಕೆಫೆ ಮುಂದೆ ನಿನ್ನೆ ರಾತ್ರಿ ತುಂಬಾ ಜನ ಸೇರಿದ್ದರು

ಕಾಂಗ್ರೆಸ್‌ಗೆ ನಿಧಿ

ಅಮೃತಸರ 4 — ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಇಂದಿರಾಗಾಂಧಿಯವರಿಗೆ ರೂ 1 ಲಕ್ಷವನ್ನು ಇಲ್ಲಿನ ಪೌರರು ಕೊಟ್ಟರು.

ದೆಹಲಿಗೆ ಜತ್ತಿ

ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿ ಯವರು ಈ ತಿಂಗಳ 9 ನೇ ತಾ|| ದೆಹಲಿಗೆ ತೆರಳುವರು.

ವೀರು ಸರಬರಾಜು ಬಂದ್

ಶ್ರೀನಗರ 4 — ಸುಧಾಪುರಕ್ಕೆ ಹೋಗುತ್ತಿದ್ದ ಕಾಸುವೆ ನೀರು ಸಂಬಾರಾಜನ್ನು ಪಾಕಿಸ್ತಾನದ ಸೇನಾಧಿಕಾರಿಗಳು ನಿಲ್ಲಿಸಿದ್ದಾರೆ ಕಾಶ್ಮೀರ ಕಣಿವೆಯಲ್ಲಿನ ತಿಥಿವಾಲ್ ಪ್ರದೇಶದ ಪಕ್ಕದಗ್ರಾಮ ಇದು.

ಚಾಗ್ಲಾ ಹೇಳಿಕೆ

ವಾಷಿಂಗ್ಟನ್ 4 — ಭಾರತ ದೇಶ ಪೂರ್ವ ರಾಷ್ಟ್ರದ ಪ್ರಜಾಪ್ರಭುತ್ವದ ಪರಿಪ್ಲಾಪ್ತಿ ಪ್ರದೇಶವಾಗಿದೆ ಎಂದು ಭಾರತದ ರಾಯಭಾರಿ ಶ್ರೀ ಎಂ. ಸಿ. ಚಾಗ್ಲ ತಿಳಿಸಿದರು.

ಗೋಪುರ ಬಿತ್ತು

ತಿರುಚಿರಪಳ್ಳಿ ಹತ್ತಿರದ ತಿರುವನಾಯಿಕೊಯಿಲ್ ದೇವಾಲಯದ ಗೋಲು ಮಂಟಪ ಕುಸಿಯಿತು ಹೀಗಾದ್ದುದು ಭಾನುವಾರ ರಾತ್ರಿ. ಗೋಪುರದ 20 ಅಡಿಗಳ ಉದ್ದ, 1 ಅಡಿ ಅಗಲದ 12 ಕಲ್ಲು ಚಪ್ಪಡಿಗಳು ಬಿದ್ದವು

ಪಾಂಚವಾರ್ಷಿಕ ಯೋಜನೆ

ಇರಾಕಿನಲ್ಲಿರುವ ಅನಂಕ್ಷತೆಯು ನಿರ್ಮೂಲಕ್ಕೆ ಈ ವರ್ಷದಿಂದ 5 ವರ್ಷದ ಯೋಜನೆ ಪ್ರಾರಂಭವಾಗುವದು

ಇಂಗ್ಲಿಷ್ ಇರಲಿ

ನವ ದೆಹಲಿ 4 — ವಿಶ್ವವಿದ್ಯಾನಿಲಯದ ಗ್ರಾಂಟ್ಸ್ ಕಮಿಷನ್ನಿನ ಗ್ರಾಂಟ್ಸು ಚರ್ಚೆ ಎಂಡು ಗಂಟೆಗಳ ವರಗೆ ನಡೆಯಿತು ಚರ್ಚೆ ಇನ್ನೂ ಪೂರ್ಣವಾಗಿಲ್ಲ ಈ ಪೈಕಿ ಮಾತನಾಡಿದ ಸದಸ್ಯರ ಪೈಕಿ ಬಹು ಮಂದಿ ಇಂಗ್ಲೀಷು ಶಿಕ್ಷಣ ಮಾಧ್ಯಮವಾಗಿರಬೇಕೆಂದು ತಿಳಿಸಿದರು

× ಕರಾಚಿ 4 — ವಿಷ್ಣದ ವರ್ತಕರು ಪಾಕಿಸ್ತಾನದಲ್ಲಿ ಮೊದಲನೆ ಸಮ್ಮೇಳನ ನಡೆಸುವರು

ವಿವಿಧ ವರ್ತಮಾನ

ನವ ದೆಹಲಿ 4 — ಟಿಬೆಟ್ ಬಗ್ಗೆ ಚರ್ಚಿಸುವ ವಿಷಯದಲ್ಲಿ ಎತ್ತಿದ ಘಟನಾತ್ಮಕ ಕ್ರಿಯಾ ಲೋಪವನ್ನು ರಾಜ್ಯ ಸಭೆಯ ಸಭಾಪತಿ ಡಾ|| ರಾಧಾಕೃಷ್ಣನ್ನರು ತಿರಸ್ಕರಿಸಿದರು

ಂ ಂ

ನವ ದೆಹಲಿ 4 — ಜನರ ಮನಸ್ಸಿನಲ್ಲಿ ಪಂಚಶೀಲಕ್ಕೆ ಸ್ವಲ್ಪ ಧಕ್ಕೆ ಉಂಟಾಗಿದ್ದಾಗ್ಯೂ, ಟಿಬೆಟ್ ಘಟನೆಗಳಾಗಿದ್ದಾಗ್ಯೂ ಪಂಚಶೀಲ ತತ್ವಗಳನ್ನು ಹೊಂದಿರುವದೆಂದು ಪಂ|| ನೆಹರು ಲೋಕಸಭೆಯಲ್ಲಿ ತಿಳಿಸಿದರು.

ಂ ಂ

ಕಲ್ಕತ್ತಾ 4 — ಈ ದಿನ ಹೌರಾದಲ್ಲಿನ ಜಿಲ್ಲ ಮ್ಯಾಜಿಸ್ಟ್ರೇಟರ ಮನೆ ಮುಂದೆ ಪೋಲೀಸರಿಗೂ ಕಾರ್ಮಿಕರಿಗೂ ಘರ್ಷಣೆ ಆಗಿ 24 ಜನರು ಗಾಯಗೊಂಡರು ಈ ಪೈಕಿ ಗಾಯಗೊಂಡವರಲ್ಲಿ 18 ಜನ ಪೋಲೀಸರು ಇರುವರು.

ಂ ಂ

ಮಾಯಾವರಂ 4 — ಕೇರಳದ ಮುಖ್ಯ ಮಂತ್ರಿ ಶ್ರೀ ಇ ಎಂ. ಎಸ್. ನಂಬೂದರಿಪಾದರು ಇಲ್ಲಿನ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ, ಭಾರಿ ಜಮೀಂದಾರರಿಗೆ ಪರಿಹಾರಕೊಡದೆ ಭೂಮಾಲಿಕತ್ವ ನಾಶ ಮಾಡಬೇಕೆಂದೂ ಸಣ್ಣ ಭೂಮಾಲಿಕರಿಗೆ ಸಣ್ಣಪುಟ್ಟ ವ್ಯವಸ್ಥೆ ಮಾಡಿಕೊಂಡರೆ ಆಗುವದೆಂದೂ ತಿಳಿಸಿದರು.

ಂ ಂ

ಜುಲೈ 23 ನೆಯ ತಾ|| ಮೈಸೂರಿನಲ್ಲಿ ಅಖಿಲ ಭಾರತ ಸಾಮೂಹಿಕ ಅಭಿವೃದ್ಧಿ ಸಮ್ಮೇಳನ ಸಮಾವೇಶವಾಗುವದಾಗಿ ಉಪ ಮಂತ್ರಿ ಶ್ರೀ ಲಿಂಗಾರೆಡ್ಡಿ ನಿನ್ನೆ ಬೆಂಗಳೂರಿನಲ್ಲಿ ಪತ್ರಿಕೆಯವರಿಗೆ ತಿಳಿಸಿದರು ಪಂ|| ನೆಹರು ಬರುವ ಸಂಭವವಿದೆ ಎಂದು ಅವರು ತಿಳಿಸಿದರು

ಮಹಿಳೆಯರಿಗೆ ನಹಿಸಿ

ಬೆಂಗಳೂರು ಕಾರ್ಪೊರೇಷನ್ ನಿನ್ನೆ ರಾಜ್ಯಪಾಲರಾದ ಶ್ರೀ ಮಂಗಳದಾಸ ಪಕ್ವಾಸರಿಗೆ ಮಾನಪತ್ರ ಅರ್ಪಿಸಿತು ಅವರು ಮಾನಪತ್ರಕ್ಕೆ ಉತ್ತರಕೊಡುತ್ತ ಪೌಂಡಳಿತವನ್ನು ಮಹಿಳೆಯರಿಗೆ ವಹಿಸಬೇಕೆಂದು ತಿಳಿಸಿದರು

ಬಿಹಾರಿನ ಸಹಕಾರ ಮಂತ್ರಿ ಶ್ರೀ ಜೆ ಎಸ್ ಲಾಲರು ಪಾಟ್ನಾದಲ್ಲಿ ಹೇಳಿಕೆಯಿತ್ತು, ಕಳೆದ ವರ್ಷದ ಕೊನೆಯ ವೇಳೆಗೆ ಸಹಕಾರ ವ್ಯವಸಾಯಕ್ಕೆ ಶೇಕಡ 20 ವ್ಯವಸಾಯಗಾರರು ಸೇರಿರುವರು ಎಂದರು

ನವ ದೆಹಲಿ 4 — ಸಕ್ಕರೆ ರಫ್ತು ಕಳೆದ ವರ್ಷಕ್ಕಿಂತ ಈ ವರ್ಷ ಕಡಿಮೆ ಆಗಬಹುದು

ಕೊಪರ್‌ಹೇಗನ್ 4 — ಸೆಣ್ಣಾದಾದ್ವೀಪ ಸಾಟ್ಟ್‌ಹೋಂನ ಕೆಲವು ಡಜನ್ನಿನ ಜನಸಂಖ್ಯೆಯವರಿಗೆ ಮಳೆ ನೀರು ಕುಡಿಯುವಂತೆ ಸೂಚಿಸಲಾಗಿದೆ ಏನೀರು ರೇಡಿಯೋ ಆಕ್ಟಿವ್ ಆಗಿರುವದೆ ಕಾರಣ,

ನವ ದೆಹಲಿ 4 — ಸ್ವಲ್ಪ ಹೃದಯರೋಗದಿಂದ ರುಗ್ಣಾಲಯದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗೃಹ ಮಂತ್ರಿ ಪಂ|| ಪಂತರು ಈಗ ಪೂರ್ಣ ಗುಣಮುಖರಾಗಿರುವರು.

ವಾಷಿಂಗ್ಟನ್ 4 — ಚಿತ್ರ ಭೇಟಿಯೊಂದರಲ್ಲಿ ಪಂ|| ನೆಹರು ಮಾತನಾಡುತ್ತಾ, ಅಧಿಕಾರದಿಂದ ನಿವೃತ್ತರಾಗಲು ಈಗ ತಾವು ಇಚ್ಚಿಸಿಲ್ಲವೆಂದು ತಿಳಿಸಿದರು.

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ
6 ಚತುರ್ದಶಿ ಅಶ್ವಿನಿ

ವಿವಿಧ ವರ್ತಮಾನ

ನವದೆಹಲಿ 4 — ಕಲ್ಲುಸಕ್ಕರೆಯ ಮೇಲೆ ವಿಧಿಸಿದ ಉತ್ಪಾದನಾ ಶುಲ್ಕ ದಿಂದಾಗಿ 1959 ರ ಮಾರ್ಚ್ ತಿಂಗಳಲ್ಲಿ ಸುಮಾರು 70000 ರೂಗಳ ಹಣ ವಸೂಲಿ ಯಾಗಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಅಮೇರಿಕಾದ ಸಂಯುಕ್ತ ಸಂಸ್ಥಾನಗಳ ನ್ಯೂಯಾರ್ಕ್ ನಗರವೊಂದರಲ್ಲೇ 16 ಕಲಾಸಂಗ್ರಹಾಲಯಗಳು, 4 ವಸ್ತು ಸಂಗ್ರಹಾಲಯಗಳು (ಬಟ್ಟಾನಿಕ ಲಾಯಿತು.

ಲ್ ಗಾರ್ಡನ್ಸ್, 17 ಐತಿಹಾಸಕ ವಸ್ತು ಗಳ ಸಂಗ್ರಹಾಲಯಗಳಿವೆ.

ನವದೆಹಲಿ 4— 57–58 ರಲ್ಲಿ ಮಾಜಿ ಸಂಸ್ಥಾನಾಧೀಶರುಗಳಿಗೆ ಸುಮಾರು 18000 ಪೌಂಡುಗಳಷ್ಟು ವಿದೇಶಿ ವಿನಿಮಯ ಸೌಲಭ್ಯವನ್ನು ಒದಗಿಸಲಾಯಿತು ; ಅದೇ ಅವಧಿಯಲ್ಲಿ 16 ಮಾಜಿ ಅರಸರು ಭಾರತದ ಆಚೆ ನಿವಾಸ ಕೈಗೊಂಡಿದ್ದರು, ಎಂದು ಲೋಕಸಭೆಯಲ್ಲಿ ತಿಳಿಸ

ನವದೆಹಲಿ 4— 1450 ಮಂದಿ ಯಾತ್ರಾರ್ಥಿಗಳು ಎಸ್ ಎಸ್ ಮಜಫಂ ಎಂಬ ಹಡಗಿನಲ್ಲಿ ಏಪ್ರಿಲ್ 30 ರಂದು ಮುಂಬೈನಿಂದ ಜೆಡ್ಡಾಕ್ಕೆ ಪ್ರಯಾಣ ಮಾಡಿದರು ; ಇಲ್ಲಿಯವರೆಗೆ 5069 ಮಂದಿ ಯಾತ್ರಿಕರು ಜೆದ್ದಾಕ್ಕೆ ಪ್ರಯಾಣ ಬೆಳೆಸಿರುವರು.

ಗೋರಕ್ಷಣ ಪತ್ರಿಕೆಗೆ ಜೊಬಲಿಗರಾಗಿರಿ

ವುಡ್‌ಲ್ಯಾಂಡ್ಸ್

Crowded 5th Week

ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡ ಬೇಕೆನ್ನಿಸುವ ಚಿತ್ರ :

ಅನಾಡಿ

(ಹಿಂದಿ)

ತಾರಾಗಣ:- ನೂತನ್, ರಾಜ್ ಕಪೂರ್ ಮೋತೀಲಾಲ್, ಶುಭಾ ಖೋಟೆ

ಆರಂಭ— 3–5–59 ರಿಂದ

ಮಿಲ್ಕಿಹಳ್ಳಿಯಲ್ಲಿ ಕಪಿಲ್

Edited, Printed & Published by Dharma Prachara Nirata M S Krishna at the Satyavadi Press Chamarajapuram, Mysore